ಸೃಜನಿ

I S S N: 2583-3510

SIRDF JOURNALS

editor@srujani.in
www.srujani.in

**SRUJANI: Indian Journal of Innovative Research and Development (SIJIRD)**
Volume-5 Issue 2, May-June 2026, Pp. 90-97
Bi-Monthly, Peer-Reviewed, Open Access, Indexed Journal

# ಚರಿತ್ರೆಯಲ್ಲಿ ದಲಿತರು: ಒಂದು ವಿವೇಚನೆ

**ಡಾ.ನರಸಿಂಹರಾಜು ಹೆಚ್.ಸಿ**
ಅತಿಥಿ ಉಪನ್ಯಾಸಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ದೇವನಹಳ್ಳಿ, ಬೆಂಗಳೂರು.

***Abstract:***
*ಭಾರತೀಯ ಚರಿತ್ರೆಯಲ್ಲಿ ದಲಿತ ಸಮುದಾಯಗಳ ಸ್ಥಾನಮಾನ, ಸಾಮಾಜಿಕ ಸ್ಥಿತಿ ಮತ್ತು ಹೋರಾಟಗಳು ಮಹತ್ವದ ಅಧ್ಯಯನ ವಿಷಯವಾಗಿದೆ. ಶತಮಾನಗಳಿಂದಲೂ ಜಾತಿ ಆಧಾರಿತ ಸಾಮಾಜಿಕ ವ್ಯವಸ್ಥೆಯಲ್ಲಿ ದಲಿತರು ಅಸಮಾನತೆ, ಅಸ್ಪೃಶ್ಯತೆ ಮತ್ತು ಸಾಮಾಜಿಕ ಬಹಿಷ್ಕಾರವನ್ನು ಎದುರಿಸುತ್ತಾ ಬಂದಿದ್ದಾರೆ. ಈ ಸಂಶೋಧನಾ ಲೇಖನವು ಭಾರತೀಯ ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ದಲಿತರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿಯನ್ನು ವಿಶ್ಲೇಷಿಸುತ್ತದೆ. ಪ್ರಾಚೀನ ಕಾಲದಿಂದ ಮಧ್ಯಯುಗ, ವಸಾಹತುಶಾಹಿ ಕಾಲ ಮತ್ತು ಸ್ವಾತಂತ್ರ್ಯೋತ್ತರ ಭಾರತದಲ್ಲಿ ದಲಿತರ ಜೀವನಾನುಭವಗಳು, ಹಕ್ಕುಗಳಿಗಾಗಿ ನಡೆದ ಹೋರಾಟಗಳು ಹಾಗೂ ಸಾಮಾಜಿಕ ಪರಿವರ್ತನೆಯ ಚಳವಳಿಗಳನ್ನು ಈ ಅಧ್ಯಯನವು ಪರಿಶೀಲಿಸುತ್ತದೆ. ಜ್ಯೋತಿರಾವ್ ಫುಲೆ, ಡಾ. ಬಿ.ಆರ್. ಅಂಬೇಡ್ಕರ್ ಮೊದಲಾದ ಸಮಾಜ ಸುಧಾರಕರ ಕೊಡುಗೆಗಳು ದಲಿತ ಸಬಲೀಕರಣದ ದಿಕ್ಕಿನಲ್ಲಿ ಮಹತ್ವದ ಪಾತ್ರ ವಹಿಸಿವೆ. ಭಾರತೀಯ ಸಂವಿಧಾನವು ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಮಾನವ ಹಕ್ಕುಗಳನ್ನು ಖಾತರಿಪಡಿಸುವ ಮೂಲಕ ದಲಿತರ ಅಭಿವೃದ್ಧಿಗೆ ಕಾನೂನು ರಕ್ಷಣೆಯನ್ನು ಒದಗಿಸಿದೆ. ಆದಾಗ್ಯೂ, ಇಂದಿನ ಸಮಾಜದಲ್ಲಿಯೂ ದಲಿತರು ಎದುರಿಸುತ್ತಿರುವ ಸಾಮಾಜಿಕ ತಾರತಮ್ಯ, ಆರ್ಥಿಕ ಅಸಮಾನತೆ ಮತ್ತು ಅವಕಾಶಗಳ ಕೊರತೆಗಳು ಸವಾಲುಗಳಾಗಿ ಉಳಿದಿವೆ. ಹೀಗಾಗಿ, ದಲಿತರ ಚಾರಿತ್ರಿಕ ಅನುಭವಗಳನ್ನು ಅರ್ಥಮಾಡಿಕೊಳ್ಳುವುದು ಸಮಾನತೆ ಮತ್ತು ಸಾಮಾಜಿಕ ನ್ಯಾಯ ಆಧಾರಿತ ಸಮಾಜ ನಿರ್ಮಾಣಕ್ಕೆ ಅಗತ್ಯವಾಗಿದೆ.*

***Keywords:*** *ದಲಿತ ಚರಿತ್ರೆ, ಜಾತಿ ವ್ಯವಸ್ಥೆ, ಸಾಮಾಜಿಕ ನ್ಯಾಯ, ಡಾ. ಬಿ.ಆರ್. ಅಂಬೇಡ್ಕರ್, ದಲಿತ ಚಳವಳಿ*

ಬ್ರಿಟಿಷ್ ಆಳ್ವಿಕೆಯಿಂದ ದೇಶವು ಅನೇಕ ರೀತಿಯ ಏಳು ಬೀಳುಗಳನ್ನು ಕಂಡಿದ್ದರೂ ಸಹ ದೇಶದ ಸಾರ್ವಭೌಮತ್ವದ ಸಂಕೇತವಾಗಿ ಸಂವಿಧಾನವನ್ನು ರಚನೆ ಮಾಡಿಕೊಂಡು, ತನ್ನದೇ ಆದ ಆಡಳಿತ ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೂಲಕ ಹಾಗೂ ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಸಮಸಂಸ್ಕೃತಿ ಕಲ್ಪನೆಯ ಸಂವಿಧಾನ ರಚಿಸಿಕೊಂಡಿತು. ಇದು ಭಾರತದ ನೂತನ ಯುಗಕ್ಕೆ ಸಾಕ್ಷೀಯಾಯಿತು. ಭಾರತ ದೇಶವು ಹಲವು ಬಗೆಯ ಧರ್ಮ, ಜಾತಿ, ಜನಾಂಗ, ಸಂಸ್ಕೃತಿಗಳನ್ನು ಒಳಗೊಂಡಿದ್ದರೂ ಒಂದು ರಾಷ್ಟ್ರ ಎನ್ನುವ ಪರಿಕಲ್ಪನೆಯಲ್ಲಿ ದೇಶದ ಅಖಂಡತೆಗೆ ಸಾಕ್ಷಿಯೆಂಬಂತೆ ಇಲ್ಲಿನ ಜೀವನಕ್ರಮಗಳನ್ನು ನೋಡಲಾಗುತ್ತದೆ. ಹರಪ್ಪ ನಾಗರಿಕತೆಯ ನಂತರದ

***Please cite this article as:*** ನರಸಿಂಹರಾಜು, ಹೆಚ್.ಸಿ. (2026). ಚರಿತ್ರೆಯಲ್ಲಿ ದಲಿತರು: ಒಂದು ವಿವೇಚನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(2), 90–97

ದಿನಗಳಲ್ಲಿ ಮಧ್ಯ ಏಷ್ಯಾದಿಂದ ಭಾರತಕ್ಕೆ ವಲಸೆ ಬಂದ ಆರ್ಯರು ತಮ್ಮ ಅಗತ್ಯಕ್ಕೆ ತಕ್ಕಂತೆ ಭಾರತದ ಮೂಲನಿವಾಸಿಗಳ ಮೇಲೆ ವ್ಯವಸ್ಥಿತ ಸಾಂಸ್ಕೃತಿಕ ದಾಳಿ ಮಾಡಿದರು. ಇವರ ಈ ದಾಳಿ ಕೇವಲ ಭೌತಿಕವಾಗಿರದೆ ಪುರಾಣದ ಹಿನ್ನೆಲೆಯಲ್ಲಿ ಬೌದ್ಧಿಕವಾಗಿ ಅಂದಿನಿಂದ ಇಂದಿನವರೆಗೂ ಅವರ ದಾಳಿಯ ಸ್ವರೂಪಗಳು ಕಾಲದಿಂದ ಕಾಲಕ್ಕೆ ಭಿನ್ನ ಭಿನ್ನವಾಗಿ ಬಾಧಿಸುತ್ತಿರುವುದನ್ನು ಇಂದಿಗೂ ಕಾಣಲಾಗುತ್ತಿದೆ. ಪ್ರಾಚೀನ ಕಾಲದಿಂದ ಭಾರತಕ್ಕೆ ಸ್ವಾತಂತ್ರ್ಯ ಬರುವವರೆಗೂ ದಲಿತ ಸಮುದಾಯಗಳ ಜೀವನಕ್ರಮಗಳನ್ನು ಕಡೆಗಣಿಸಲಾಗಿತ್ತು. ದಲಿತೇತರರ ಜೀವನಕ್ರಮಗಳನ್ನು ದಾಖಲಿಸುವಾಗ ಅಲ್ಲೊಂದು ಇಲ್ಲೊಂದು ಸಣ್ಣಪುಟ್ಟ ಅಂಶಗಳು ದಾಖಲಾದದ್ದು ಬಿಟ್ಟರೆ ಅವರಿಗೆ ಪ್ರಾಮುಖ್ಯತೆಯನ್ನು ನೀಡಿ ಚರಿತ್ರೆಯ ಪುಟಗಳಲ್ಲಿ ದಾಖಲಿಸಿಲ್ಲ.

**ಚರಿತ್ರೆ ಮತ್ತು ದಲಿತರು**

ಇಂದು ನಾವು ಬೌದ್ಧಿಕ ಚೌಕಟ್ಟಿನಲ್ಲಿ ಅಧ್ಯಯನ ಮಾಡುತ್ತಿರುವಾಗ ಚರಿತ್ರೆ ಎಂದರೆ ಕೇವಲ ಯುದ್ಧ ಮತ್ತು ರಾಜಕೀಯ ಉದ್ದೇಶಗಳ ಸಾರವೇ ಆಗಿದೆ. ಚರಿತ್ರೆ ರಚಿಸುವವರಿಗೆ ಪ್ರಭುತ್ವಕೇಂದ್ರಿತ ಅಂಶಗಳಷ್ಟೇ ವಸ್ತುಗಳಾಗಿದ್ದವು. ಉಳಿದೆಲ್ಲವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಕೇವಲ ಪ್ರಭುತ್ವಕೇಂದ್ರಿತ ಚರಿತ್ರೆಯನ್ನು ಮಾತ್ರ ಭಾರತದ ಚರಿತ್ರೆ ಎಂದು ಬಿಂಬಿಸಿ ನಂಬಿಸಲಾಯಿತು. ಹಾಗೆಯೇ ಮುಂದುವರಿದು ಅರಮನೆಯ ಜೊತೆಗೆ ಗುರುಮನೆಯನ್ನು ಸೇರಿಸಿಕೊಂಡು ಉತ್ತರ ಶ್ರೇಷ್ಠ ದಕ್ಷಿಣ, ಕನಿಷ್ಠ ಎನ್ನುವ ನಿಟ್ಟಿನಲ್ಲಿ ಕೇವಲ ಉತ್ತರಭಾರತದ ಚರಿತ್ರೆಯನ್ನೇ ಇಡೀ ಭಾರತದ ಚರಿತ್ರೆ ಎಂದು ಬರೆಯುವ ಹಂತಕ್ಕೂ ತಲುಪಿದರು. ಚರಿತ್ರೆ ಬರವಣಿಗೆಗೆ ಸೀಮಿತವಾಗಿದ್ದ ಒಂದು ವರ್ಗದ ಬದಲಾಗಿ ಹಲವಾರು ವರ್ಗಗಳ ಸಹಭಾಗಿತ್ವದಿಂದ ಕೇಂದ್ರೀಕರಿಸಿದ್ದ ಚರಿತ್ರೆಯು ವಿಕೇಂದ್ರೀಕರಣಕ್ಕೆ ಸಾಕ್ಷಿಯಾಯಿತು. ಪ್ರಮುಖವಾಗಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆ ಮತ್ತು ಆಲೋಚನೆಗಳು ಸಮಾಜದಲ್ಲಿ ಪಸರಿಸಿದ ಮೇಲಂತೂ ಚರಿತ್ರೆ ಎಂದರೆ ಹೀಗೆ, ಇಷ್ಟೇ, ಎನ್ನುತ್ತಿದ್ದವರಲ್ಲಿ ಚರಿತ್ರೆ ಎಂದರೆ ಹೀಗೂ ಇದೆ ಎನ್ನುವ ವಾಸ್ತವತೆಯನ್ನು ಬೆಳೆಸಿತು. ಇದರಿಂದ ಅರಮನೆ ಮತ್ತು ಗುರುಮನೆಗೆ ಸೀಮಿತಗೊಂಡು ಚರಿತ್ರೆ ರಚಿಸುವವರ ಕಣ್ಣಿಗೆ ಬಿದ್ದವರು ಹಾಗೂ ಪ್ರಭುತ್ವದ ಜೊತೆ ಹೊಗಳಿಸಿಕೊಂಡು ಅಥವಾ ತೆಗಳಿಸಿಕೊಂಡು ಪ್ರಭುತ್ವದ ಕಣ್ಣಿಗೆ ಬಿದ್ದವರು ಮಾತ್ರ ಚರಿತ್ರೆಯಲ್ಲಿ ಕಂಡುಬಂದು ಚರಿತ್ರೆಯ ಪ್ರತಿನಿಧಿಗಳಾಗಿ ಉಳಿದವರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿತ್ತು. ಆದರೆ ಶೋಷಿತರು ಮತ್ತು ಈ ದೇಶದ ಮೂಲ ನಿವಾಸಿಗಳು ಚರಿತ್ರೆಯ ರಚನೆಯಲ್ಲಿ ತೊಡಗಿಕೊಂಡಾಗ ಪ್ರಭುತ್ವದ ಮೋಜು–ಮಸ್ತಿಗಾಗಿ ದುಡಿದ ಈ ದೇಶದ ಸಾವಿರಾರು ಸಂಖ್ಯೆಯ ಶೋಷಿತರ ಚರಿತ್ರೆಯು ದಾಖಲಾಗುತ್ತ ಸಾಗಿತು. ಚರಿತ್ರೆಯ ರಚನೆಗೆ ಇದಿಷ್ಟು ಎನ್ನುವ ಸಾಂಪ್ರದಾಯಿಕತೆ ತೊಲಗಿ ಬೆವರು ಮತ್ತು ದುಡಿಮೆಯ ಮೂಲಕ ಚರಿತ್ರೆ ರಚಿಸಬಹುದೆಂದು ತೋರಿಸಿಕೊಟ್ಟರು.

ದಲಿತಚರಿತ್ರೆಯನ್ನು ನಾವು ಮೊದಲಿಗೆ ಗುರುತಿಸುವುದು ಸಾಹಿತ್ಯಕೃತಿಗಳಲ್ಲಿ. ಕನ್ನಡ ಸಾಹಿತ್ಯದ ಮುಖ್ಯ ಭಾಗವಾಗಿರುವ ವಚನಗಳಲ್ಲಿ ಹಾಗೂ ಹಳಗನ್ನಡ ಸಾಹಿತ್ಯಕೃತಿಗಳಲ್ಲಿ ಮತ್ತು ಕನಕದಾಸರ ಕೀರ್ತನೆಗಳಲ್ಲಿ ಕಂಡುಬರುತ್ತದೆ. ಬಸವಣ್ಣನವರ ಕಾಲದಲ್ಲಿ ಅವರ ಉಪಸ್ಥಿತಿಯಲ್ಲಿ ನಡೆದ ಸಮಗಾರ ಹರಳಯ್ಯನ ಮಗನಿಗೆ ಮತ್ತು ಬ್ರಾಹ್ಮಣರ ಮಧುವರಸನ ಮಗಳಿಗೂ ವಿವಾಹವನ್ನು ಮಾಡಿಸಿದ್ದು ದಲಿತಚರಿತ್ರೆಗೆ ಮುನ್ನುಡಿ ಬರೆದ ಚಾರಿತ್ರಿಕ ಸಂಗತಿ ಯಾಗಿದೆ. ಕನ್ನಡದ ಕವಿ ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಹರಿಶ್ಚಂದ್ರ ಬೇಟೆಯಾಡಲು ಕಾಡಿಗೆ ಹೊರಟಾಗ ಅಲ್ಲಿ ಜರುಗುವ ಗಾನರಾಣಿಯರು ಮತ್ತು ಹರಿಶ್ಚಂದ್ರರ ನಡುವೆ ನಡೆಯುವ ಜಾತಿ ವಿಚಾರದ ಸಂಭಾಷಣೆಗಳು, ಅಸ್ಪೃಶ್ಯ ಜಾತಿಯ ಹೆಣ್ಣುಗಳಲ್ಲಿ ನಡೆ, ನುಡಿ,

ಸೌಂದರ್ಯ ಎಲ್ಲ ರೀತಿಯ ಗುಣಲಕ್ಷಣಗಳು ಇದ್ದರೂ ಅವರು ಹುಟ್ಟಿನ ಆಧಾರದಲ್ಲಿ ಹರಿಶ್ಚಂದ್ರನು ಅವರನ್ನು ನಿಂದಿಸಿ ನಿರಾಕರಿಸುತ್ತಾನೆ. ಹರಿಶ್ಚಂದ್ರನು ಗಾನರಾಣಿಯರ ಗಾನಕ್ಕೆ ಮನಸೋತು ಚಿನ್ನದ ಒಡವೆಗಳನ್ನು ನೀಡುತ್ತಾನೆ. ಆದರೆ ಗಾನರಾಣಿಯರು 'ಸುಡುಸುಡನೆ ಸುಡುವ ಈ ಬಿರುಬಿಸಿಲಿನ ಸೆಕೆಯಿಂದ ಬಾಯ್ಬಿಡುವ ನಮಗೆ ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು' ಎಂದು ಕೇಳಿಕೊಳ್ಳುತ್ತಾರೆ. ಆದರೆ ಹರಿಶ್ಚಂದ್ರ ಅದನ್ನು ಕೊಡಲು ನಿರಾಕರಿಸುತ್ತಾನೆ. ಅದಕ್ಕೆ ಗಾನರಾಣಿಯರು ನಮ್ಮನ್ನು ಮದುವೆಯಾಗು ಎಂದು ಕೇಳಿಕೊಳ್ಳುತ್ತಾರೆ. ಆದರೆ ಹರಿಶ್ಚಂದ್ರ ಅವರ ಹುಟ್ಟಿನ ಜಾತಿಯನ್ನಾಧರಿಸಿ ಅವರು ಸುಂದರವಾಗಿದ್ದರೂ ಕೂಡ ಮದುವೆಯ ಪ್ರಸ್ತಾಪವನ್ನು ನಿರಾಕರಿಸಿ 'ಬಚ್ಚಲುನೀರು ತಿಳಿಯಾದರೆ ಸ್ನಾನಕ್ಕೆ ಯೋಗ್ಯವೇ? ನಾಯಿಹಾಲು ಕುಡಿಯಲು ಯೋಗ್ಯವೇ? ಮಸಣದಲ್ಲಿ ಬೆಳೆದ ಹೂ ಮುಡಿಯಲು ಯೋಗ್ಯವೇ? ಹೊಲತಿಯ ರಾದ ನಿಮ್ಮಲ್ಲಿ ಯೌವ್ವನದ ಸೊಕ್ಕು, ರೂಪಿನ ಗಾಡಿ, ಜಾಣತನಗಳಿದ್ದರೆ ಸ್ಪೃಶ್ಯರಾಗುವಿರಾ? ಶಿವ ಶಿವ! ಎಂತಹ ಹೊಲಸು ಮಾತಿದು ಎಂಬುದಾಗಿ ಹೇಳುತ್ತಾನೆ. ಹೀಗೆ ಸಾಹಿತ್ಯ ಕೃತಿಗಳಲ್ಲಿ ದಲಿತರ ಸ್ಥಿತಿಗತಿಗಳನ್ನು ತಿಳಿದು ಅದನ್ನು ಚರಿತ್ರೀಕರಿಸಬೇಕಾಗುತ್ತದೆ. ಆದರೆ ಬರವಣಿಗೆಯ ಮೂಲಕ ದಲಿತಚರಿತ್ರೆ ದಾಖಲಾದದ್ದು ವಿದೇಶಿಯರು ಭಾರತಕ್ಕೆ ಬಂದು, ಭಾರತವನ್ನು ನೋಡಿ ತಾವು ಕಂಡ ಅನುಭವವನ್ನು ಲಿಖಿತ ರೂಪದಲ್ಲಿ ಬರೆದಾಗ. ಅದನ್ನು ಅಧ್ಯಯನ ಮಾಡಿದವರು ದಲಿತಚರಿತ್ರೆಯ ರಚನೆಗೆ ಆಕರಗಳಾಗಿ ಬಳಸಿಕೊಳ್ಳಲು ಪ್ರಾರಂಭಿಸುತ್ತಾರೆ. ಅದರಲ್ಲಿ ಮೊದಲಿಗರು ಬಾಬಾಸಾಹೇಬ್ ಬಿ.ಆರ್.ಅಂಬೇಡ್ಕರ್ ಅವರು. ಹಾಗಾಗಿ ಇವರನ್ನು ಭಾರತದ ಮೊದಲ ಸಬಾಲ್ಟರ್ನ್ ಅಧ್ಯಯನಕಾರರೆಂದು ಕರೆಯಲಾಗಿದೆ.

ದಲಿತಸಮುದಾಯಗಳು ಬಡತನ, ಶೋಷಣೆ, ಅನಕ್ಷರತೆಯಿಂದ ಜೀವನಪೂರ್ತಿ ಪ್ರಭುತ್ವ ಮತ್ತು ಪುರೋಹಿತಶಾಹಿಗಳ ಸೇವೆ ಮಾಡುವುದರ ಜೊತೆಗೆ ಭಾರತವನ್ನು ಭೌತಿಕವಾಗಿ ಕಟ್ಟಿದವರು. ಅಂದರೆ, ಇಂದು ನಮಗೆ ಕಾಣುತ್ತಿರುವ ದೇವಾಲಯ, ಅರಮನೆಗಳು, ವೈಭವ ಹಾಗೂ ಆಕರ್ಷಣೆಯಿಂದ ಕಂಗೊಳಿಸುವ ಸ್ಥಳಗಳು ದುಡಿಯುವ ವರ್ಗದವರ ಕೊಡುಗೆಗಳು. ಪುರೋಹಿತ ಹಾಗೂ ಬಂಡವಾಳಶಾಹಿಗಳ ಕುತಂತ್ರ ವ್ಯವಸ್ಥೆಯಿಂದ ಚರಿತ್ರೆಯಲ್ಲಿ ಕಂಡರೂ ಕಾಣೆಯಾದವರು. ಅವರ ನೋವಿನ ಸಂಗತಿಗಳ ಬಗ್ಗೆ ಮಾತನಾಡದೆ ತಮ್ಮ ದುಡಿಮೆ–ಶ್ರಮದಿಂದ ಬಂದ ಬೆವರಿನ ಮೂಲಕ ಈ ರಾಷ್ಟ್ರದ ಸಂಸ್ಕೃತಿ ಕಟ್ಟಿದವರು ದಲಿತಸಮುದಾಯಗಳ ಜನರು. ಇವರ ಚರಿತ್ರೆ ಅಡಗಿರುವುದು ತಮಗೆ ತಾವೆ ಸ್ಪೃಶ್ಯರೆಂದು ಕರೆದುಕೊಂಡು ತಮ್ಮ ಹೆಗ್ಗಳಿಕೆಯನ್ನು ಹೇಳಿಕೊಳ್ಳುವ ದರ್ಪದ ಮಾತುಗಳು ದಲಿತಚರಿತ್ರೆಯ ರಚನೆಗೆ ಆಕರಗಳೆಂದು ದಲಿತ ಸಂವೇದನೆಯ ಚಿಂತಕರ ಅಭಿಪ್ರಾಯವಾಗಿದೆ. ಜನ ಮತ್ತು ಪ್ರಭುತ್ವಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ಬದುಕಿನ ವಿಸ್ತೃತ ಮಾಹಿತಿಯನ್ನು ಚರ್ಚೆಗೆ ಒಳಪಡಿಸುವ ದಲಿತಚರಿತ್ರೆಯನ್ನು ಅನಾವರಣಗೊಳಿಸಬೇಕಾಗಿದೆ.

ಧರ್ಮಕೇಂದ್ರಿತ ಚರಿತ್ರೆ ರಾಷ್ಟ್ರೀಯ ಚರಿತ್ರೆ ಎನಿಸಿಕೊಂಡಿದೆ. ಹತ್ತು ಜನ ಬರೆದ ವೈಭವ ಪ್ರೇರಿತ ಧಾರ್ಮಿಕ ಚರಿತ್ರೆ ರಾಷ್ಟ್ರೀಯ ಚರಿತ್ರೆ ಎನಿಸಿಕೊಳ್ಳುವುದಾದರೆ, ತೊಂಬತ್ತು ಜನ ದುಡಿಮೆಯ ಬೆವರಿನ ಮೂಲಕ ಈ ದೇಶ, ಭಾಷೆ, ಜಲ–ನೆಲವನ್ನು ರಕ್ಷಿಸಿದವರ ಚರಿತ್ರೆಗೆ ಪ್ರಾಮುಖ್ಯತೆಯನ್ನು ನೀಡಿ ಚಾರಿತ್ರಿಕ ದೃಷ್ಟಿಕೋನದಲ್ಲಿ ನೋಡಿದರು ಡಾ.ಬಿ.ಆರ್.ಅಂಬೇಡ್ಕರ್. ಇವರು ವೈದಿಕರ ಸಂಸ್ಕೃತಿ ಹಾಗೂ ಆಚರಣೆಗಳನ್ನು ಪ್ರಶ್ನೆ ಮಾಡುತ್ತ ಜನಕೇಂದ್ರಿತ ಚರಿತ್ರೆಯ ಬರವಣಿಗೆಗೆ ಮುಂದಾದರು. ಬ್ರಿಟಿಷರೆದುರು ಭಾರತದ ಸಮಸ್ಯೆಗಳನ್ನು ಮಂಡಿಸುವಾಗ ಸ್ಪೃಶ್ಯ ಮತ್ತು ಅಸ್ಪೃಶ್ಯ ಪರಿಕಲ್ಪನೆಯಲ್ಲಿ ದುಡಿಯುವ ವರ್ಗಗಳ ಪರವಾಗಿ ಅವರ ಜೀವನಕ್ರಮಗಳ ಬಗ್ಗೆ ದಾಖಲೆಗಳನ್ನು ಸಂಗ್ರಹಿಸಿ ವಾದ ಮಾಡುತ್ತಿದ್ದರು. ಇವರ ಸಾಮಾಜಿಕ ಸಮಸ್ಯೆಗಳ ವಿಮೋಚನೆಗಾಗಿ ನ್ಯಾಯಬದ್ಧವಾಗಿ

ಹೋರಾಡುತ್ತ ಅದನ್ನು ಬ್ರಿಟಿಷರೆದುರು ಅರ್ಥಪೂರ್ಣವಾಗಿ ಮಂಡಿಸುತ್ತ ದಲಿತಸಮುದಾಯಗಳ ಇತಿಹಾಸವನ್ನು ರಚಿಸುವಲ್ಲಿ ಮತ್ತು ಚರಿತ್ರೆಯನ್ನು ಪುನಾರಚನೆ ಮಾಡುವಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ. "ಜಾತಿಪದ್ಧತಿಗೆ ಬಲಿಪಶುಗಳಾಗಿರುವ ಜೀವಿಗಳ ಬಗ್ಗೆ ತಿಳಿಯುವ ಉದ್ದೇಶದಿಂದ ಅಂಬೇಡ್ಕರ್ ಅವರು ಜಾತಿಪದ್ಧತಿಯ ಉಗಮ ಮತ್ತು ಕಾರ್ಯಾಚರಣೆಯ ಬಗ್ಗೆ ತಿಳಿಯುವ ಪ್ರಯತ್ನ ನಡೆಸಿದರು. ಆ ಮೂಲಕ ಭಾರತದ ನಿಜವಾದ ಸಾಮಾಜಿಕ ಚರಿತ್ರೆಗೆ ಮುನ್ನುಡಿ ಬರೆದು ಖ್ಯಾತ ಚರಿತ್ರೆಕಾರರಾದರು. ಜಾತಿ ಕುರಿತು ಅಂಬೇಡ್ಕರ್ ಅವರು ನಡೆಸಿದ ಸಂಶೋಧನೆ ಹಾಗೂ ಬರವಣಿಗೆ ಅವರನ್ನು ಪ್ರಪಂಚದ ಪ್ರಥಮ ಸಬಾಲ್ಟರ್ನ್ ಚರಿತ್ರೆಕಾರರನ್ನಾಗಿಸಿತು" ಎಂಬುದನ್ನು ದಲಿತಚರಿತ್ರೆ ರಚನೆಯಲ್ಲಿ ಕಾಡಲೇಬೇಕಾದ ಪ್ರಶ್ನೆಗಳು ಎಂಬ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಅಂಬೇಡ್ಕರ್ ಅವರ ಚಿಂತನೆಯ ಮುಖಾಂತರ ದಲಿತ ಸಮುದಾಯಗಳ ಬಗ್ಗೆ ಅಧ್ಯಯನಗಳು ನಡೆದಿವೆ. ಅದೇ ಮಾದರಿಯಲ್ಲಿ ಪ್ರಸ್ತುತ ಮಹಾಪ್ರಬಂಧದಲ್ಲಿ ವಿಸ್ತರಿಸಲಾಗಿದೆ.

ವ್ಯಾಪಾರಕ್ಕಾಗಿ, ಧರ್ಮಪ್ರಚಾರಕ್ಕಾಗಿ ಹಾಗೂ ಪ್ರವಾಸಿಗರಾಗಿ ಬಂದ ವಿದೇಶಿಯರು ಭಾರತದಲ್ಲಿ ತಮ್ಮ ಅಸ್ತಿತ್ವವನ್ನು ಕಂಡುಕೊಂಡ ನಂತರ ಈ ನೆಲದ ಗ್ರಾಮೀಣ ಪ್ರದೇಶದ ಭಾಗಗಳಲ್ಲಿ ಸಂಚರಿಸಿ, ಅಲ್ಲಿದ್ದ ಜನಸಾಮಾನ್ಯರನ್ನು ಕಣ್ಣಾರೆ ಕಂಡು ಅವರ ಜೀವನಕ್ರಮದ ಬಗ್ಗೆ ದಾಖಲಿಸುವುದರ ಜೊತೆಗೆ ಅವರ ಬಗ್ಗೆ ಕರುಣೆ ತೋರಿಸಿ, ಅವರನ್ನು ತಮ್ಮ ಧರ್ಮದ ವ್ಯಾಪ್ತಿಗೆ ತರಲು ಅನೇಕ ರೀತಿಯ ಸೌಲಭ್ಯಗಳ ಆಮಿಷಗಳೊಡ್ಡಿ ಕ್ರೈಸ್ತಧರ್ಮಕ್ಕೆ ಮತ ಸ್ವೀಕಾರ ಮಾಡುವಂತೆ ಮಾಡಿದರು. ಈ ಕ್ರೈಸ್ತಧರ್ಮದ ಒಳಗೊಳ್ಳುವಿಕೆಗೆ ಆಕರಗಳಾಗಿ ಕಂಡಂತಹವರು ಭಾರತದಲ್ಲಿ ಶತಮಾನಗಳ ಕಾಲ ಅಸ್ಪೃಶ್ಯರೆನಿಸಿಕೊಂಡವರು. ಇವರಿಗೆ ಶಿಕ್ಷಣ ಕೊಡಲು ಕ್ರೈಸ್ತ ಮಿಷನರಿಗಳು ಇಂಗ್ಲಿಷ್ ಶಾಲೆಗಳನ್ನು ತೆರೆದರು. ಮೈಸೂರು ಸಂಸ್ಥಾನದಲ್ಲಿ ಎಲ್ಲರೂ ಕ್ರೈಸ್ತರಾಗದಿದ್ದರೂ ಅವರು ಸ್ಥಾಪಿಸಿದ ಶಾಲೆಗಳಲ್ಲಿ ದಲಿತ ಸಮುದಾಯದವರು ಶಿಕ್ಷಣವಂತರಾಗಿ ಸ್ವಾತಂತ್ರ್ಯ ಭಾರತದ ಹೊತ್ತಿಗೆ ಪ್ರಜ್ಞಾವಂತರಾಗುವ ಮಟ್ಟಿಗೆ ಬೆಳೆಯುತ್ತಾರೆ. ಸಂವಿಧಾನಾತ್ಮಕವಾಗಿ ಸಾಮಾಜಿಕ ಹಕ್ಕುಗಳನ್ನು ಪಡೆದುಕೊಳ್ಳಲು ಪ್ರಾರಂಭಿಸುತ್ತಾರೆ. ಇದರ ಜೊತೆಗೆ ಅಂಬೇಡ್ಕರ್ ಅವರ ವಿಚಾರಧಾರೆಗಳ ಪ್ರಭಾವದಿಂದಾಗಿ ಪ್ರಥಮ ತಲೆಮಾರಿನ ಅಕ್ಷರಸ್ಥ ಜನರಲ್ಲಿ 'ದಲಿತಸಾಹಿತ್ಯ', 'ದಲಿತಒಕ್ಕೂಟ' ಹಾಗೂ 'ದಲಿತಸಂಘಟನೆ', 'ದಲಿತಚಳವಳಿಗಳು' ಆರಂಭವಾಗುತ್ತವೆ.

ಈ ಚಳವಳಿಗಳ ಆರಂಭದ ಕಾಲಘಟ್ಟ ಕರ್ನಾಟಕದಲ್ಲಿ ದಲಿತ ಚರಿತ್ರೆಗೆ ಒಂದು ಹೊಸ ದಾರಿಗೆ ಸಾಕ್ಷಿಯಾಯಿತು. ಈ ಕಾಲಘಟ್ಟವನ್ನು ಅಧ್ಯಯನ ಮಾಡಿದ ವಿಷಯಕ್ಕೆ ಸಂಬಂಧಪಟ್ಟಂತೆ ಆದ ಬದಲಾವಣೆಗಳು ಒಂದು ಕಡೆಯಾದರೆ, ದಲಿತರಲ್ಲಿ ಪ್ರಜ್ಞಾಪೂರ್ವಕವಾಗಿ ಅದು ಪಲ್ಲಟವಾಯಿತೆಂದು ಅಂದುಕೊಳ್ಳುವುದಾದರೆ, ಈ ಪಲ್ಲಟವನ್ನು ಬಯಸದವರು ತಲೆ ತಲಾಂತರಗಳಿಂದ ಪಲ್ಲಟವಾಗದ್ದನ್ನು ಕಾಪಾಡಿಕೊಂಡು ಬಂದಿದ್ದವರು ತಮ್ಮ ಮೂಲಭೂತ ಸ್ವಾರ್ಥಪರ ಹಕ್ಕುಗಳನ್ನು ರಕ್ಷಣೆ ಮಾಡಿಕೊಳ್ಳುವುದಕ್ಕಾಗಿಯೇ ದಲಿತರ ಮೇಲೆ ದೌರ್ಜನ್ಯಗಳನ್ನು ಆರಂಭ ಮಾಡಿದರು. ಈ ದೌರ್ಜನ್ಯ ಹೇಗಿತ್ತೆಂದರೆ ಸ್ವಾತಂತ್ರ್ಯಪೂರ್ವದ ದೌರ್ಜನ್ಯಗಳು ಮೂಕವೇದನೆಯನ್ನು ಅನುಭವಿಸಿದರೆ, ಸ್ವಾತಂತ್ರ್ಯಾನಂತರದ ದೌರ್ಜನ್ಯಗಳು ಮಾತನಾಡಿದವು. ಅಂದರೆ ಮೂಲಭೂತವಾದಿಗಳನ್ನು, ದೌರ್ಜನ್ಯ ಮಾಡುವವರನ್ನು ಪ್ರಶ್ನೆ ಮಾಡಲು ಪ್ರಾರಂಭಿಸಿತು. ದೌರ್ಜನ್ಯ ಮಾಡುವವರನ್ನು ಯಾಕಾಗಿ ಮಾಡುತ್ತಿದ್ದೀರಾ ಎಂಬ ವಿರೋಧಗಳು ವ್ಯಕ್ತವಾದವು. ನಾವೂ ಸಹ ನಿಮ್ಮಂತೆ ಮನುಷ್ಯರು, ನಮಗೂ ಮತ ಚಲಾವಣೆ ಮಾಡುವ ಹಕ್ಕು ಇದೆ ಎನ್ನುವ ವಿಚಾರಗಳು ಮುನ್ನೆಲೆಗೆ ಬಂದವು. ಈ ಹಿನ್ನೆಲೆಗಳಿಂದ ಹುಟ್ಟಿಕೊಂಡಂತಹವುಗಳೇ

'ದಲಿತಸಾಹಿತ್ಯ', 'ದಲಿತಸಂಘಟನೆ' ಮತ್ತು ದಲಿತಹೋರಾಟಗಳು. ಇವು ಮಂಚೂಣಿಗೆ ಬಂದ ನಂತರ ಸಾಮಾಜಿಕ ಸ್ವಾತಂತ್ರ್ಯದ ಹೋರಾಟಗಳು ಆರಂಭವಾದವು. 1947ರಲ್ಲಿ ಭಾರತಕ್ಕೆ ಬ್ರಿಟಿಷರಿಂದ ಪಡೆದದ್ದು ಭೂಪ್ರದೇಶಕ್ಕೆ ಮತ್ತು ಮೂಲಭೂತವಾದಿಗಳಿಗೆ ಸಿಕ್ಕ ಸ್ವಾತಂತ್ರ್ಯವಾದರೆ. 1975ರಲ್ಲಿ ಈ ನೆಲದ ಮೂಲನಿವಾಸಿಗಳಾದ ದಲಿತಸಮುದಾಯದವರಿಗೆ ಒಂದಷ್ಟು ಕ್ಷೇತ್ರದಲ್ಲಿ ಸ್ವಾತಂತ್ರ್ಯ ದೊರೆಯಿತು. ಆದರೆ 1970ರ ದಶಕದಲ್ಲಿ ಹುಟ್ಟಿಕೊಂಡ ದಲಿತಸಂಘಟನೆಗಳು ಇಂದಿಗೂ ಮಾಡುತ್ತಿರುವ ಹೋರಾಟಗಳು ಸ್ವಾತಂತ್ರ್ಯ ಚಳವಳಿಯ ಮಾದರಿಯ ಹೋರಾಟಗಳೇ ಆಗಿವೆ. ಹಾಗಾಗಿ 'ಪ್ರತಿಯೊಂದು ದಲಿತಚಳವಳಿಯೂ ಸಹ ಸ್ವಾತಂತ್ರ್ಯ ಹೋರಾಟವೇ' ಎಂಬುದಾಗಿ ಪ್ರೊ.ಎನ್. ಚಿನ್ನಸ್ವಾಮಿ ಸೋಸಲೆಯವರು ಅಭಿಪ್ರಾಯಪಡುತ್ತಾರೆ.

ಸಾವಿರಾರು ವರ್ಷಗಳಿಂದ ಭಾರತೀಯ ಸಮಾಜದಲ್ಲಿ ದೌರ್ಜನ್ಯ ಮತ್ತು ಶೋಷಣೆಗೆ ಒಳಪಟ್ಟವರೆಂದರೆ ಮಹಿಳೆಯರು ಮತ್ತು ದಲಿತರು. ಭಾರತ ಜಾತ್ಯತೀತ ರಾಷ್ಟ್ರ ಎಂಬ ಪದವನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ಬಳಸಿದ್ದರೂ ಸಹ ಜಾತೀಯತೆಯ ಬೇರು ಗಟ್ಟಿಯಾಗಿ ನೆಲೆಯೂರಿ ಅದನ್ನು ಬುಡಸಮೇತ ಕೀಳಲು ಸಾಧ್ಯವಾಗದೆ ಇರುವುದು ಈ ದೇಶದ ಅತಿದೊಡ್ಡ ದುರಂತವೇ ಸರಿ. ದಲಿತರು ಜೀವನವನ್ನು ರೂಪಿಸಿಕೊಳ್ಳಲು 1975ರ ತುರ್ತುಪರಿಸ್ಥಿತಿಯ ಸಂದರ್ಭದ 20 ಅಂಶಗಳ ಕಾರ್ಯಕ್ರಮಗಳು ದಲಿತರಿಗೆ ವರವಾಗಿ ನಿಜವಾದ ಸ್ವಾತಂತ್ರ್ಯವನ್ನು ಒದಗಿಸಿತು. ಆದರೆ ಈ ತುರ್ತುಪರಿಸ್ಥಿತಿಯು ಕೆಲವರಿಗೆ ನುಂಗಲಾರದ ತುತ್ತಾಗಿ ಪರಿಣಮಿಸುತ್ತದೆ. ಪರಂಪರಾಗತವಾಗಿ ದಲಿತರು ಶೋಷಕವರ್ಗದ ದಾಸ್ಯದ ಸಂಕೋಲೆಗಳಿಗೆ ಒಳಗಾಗಿ ಜೀವನ ನಡೆಸಲು ಅವರ ಹೊಲ, ಗದ್ದೆ, ತೋಟ, ಮನೆ ಹಾಗೂ ಇನ್ನೂ ಮುಂತಾದ ಕಡೆಗಳಲ್ಲಿ ಜೀತದಾಳುಗಳಾಗಿ ದುಡಿಯುತ್ತಿದ್ದರು.ಮತ್ತೆ ಕೆಲವರು ಮುಂಗಡ ಸಾಲವನ್ನು ಪಡೆದು ಅದನ್ನು ಹಿಂದಿರುಗಿಸಲಾಗದೆ ಬಡತನದ ಬವಣೆಯಲ್ಲಿ ನಲುಗುವುದರ ಜೊತೆಗೆ ಸಾಮಾಜಿಕ ಸ್ವಾತಂತ್ರ್ಯವನ್ನು ಕಳೆದುಕೊಂಡು ನರಳುತ್ತಿದ್ದರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ 1975ರಲ್ಲಿ 'ಜೀತಪದ್ಧತಿ ನಿವಾರಣೆ', 'ಋಣಪರಿಹಾರ ಕಾಯ್ದೆ', 'ಸಾಲಮುಕ್ತಿ' ಎಂಬ ಕಾನೂನುಗಳು ಜಾರಿಗೆ ಬಂದು ದಲಿತರ ಬದುಕು ಒಂದಷ್ಟು ಚೇತರಿಸಿಕೊಳ್ಳುವಂತಾಯಿತು.

ಭಾರತಕ್ಕೆ ಸ್ವಾತಂತ್ರ್ಯ ಬಂದು ದೇಶದಲ್ಲಿ ಸಂವಿಧಾನ ರಚನೆಯಾಗಿ ತುರ್ತುಪರಿಸ್ಥಿತಿಯ ಸಂದರ್ಭಕ್ಕೆ ಎರಡು ದಶಕಗಳು ಕಳೆದರೂ ದಲಿತರ ಜೀವನಕ್ರಮಗಳು ದೊಡ್ಡ ರೀತಿಯಲ್ಲಿ ಬದಲಾವಣೆಯಾಗಿರಲಿಲ್ಲ. ಆದರೆ 1970ರ ನಂತರ ಭಾರತದ ಮಟ್ಟಿಗೆ ಅದರಲ್ಲೂ ವಿಶೇಷವಾಗಿ ದಲಿತಸಮುದಾಯದಲ್ಲಿ ಒಂದು ಹೊಸ ಚೈತನ್ಯ ಬೆಳೆಯಲಾರಂಭಿಸಿತು. ಏಕೆಂದರೆ ಆ ಹೊತ್ತಿಗೆ ಅಂಬೇಡ್ಕರ್ ಅವರ ಪ್ರವೇಶವಾಗಿ 'ಶಿಕ್ಷಣ', 'ಸಂಘಟನೆ', 'ಹೋರಾಟ'ಗಳ ಬೆನ್ನುಹತ್ತಿದ ದಲಿತವರ್ಗ ಇಡೀ ಭಾರತದಾದ್ಯಂತ ಬಾಬಾಸಾಹೇಬರ ಆಶಯದಂತೆ ಒಗ್ಗೂಡಲು ಮುಂದಾದರು. ಅದು ಕರ್ನಾಟಕದಲ್ಲೂ ಮುಂದುವರಿದು ಒಂದು ಕ್ರಾಂತಿಯನ್ನೇ ಹುಟ್ಟು ಹಾಕಿತು. ಅಂಬೇಡ್ಕರ್ ಎಂಬ ಹೆಸರಿನೊಂದಿಗೆ ಒಗ್ಗೂಡಿದ ದಲಿತಸಮುದಾಯ 'ಶೈಕ್ಷಣಿಕ', 'ಸಾಮಾಜಿಕ', 'ಆರ್ಥಿಕ' ಹೀಗೆ ಎಲ್ಲ ರಂಗಗಳಲ್ಲೂ ಮುಂಚೂಣಿಗೆ ಬರಲು ನಿರಂತರವಾಗಿ ಪರಿತಪಿಸತೊಡಗಿದರು. ಬಹಳ ಮುಖ್ಯವಾಗಿ ಬಾಬಾಸಾಹೇಬರ ಬೌದ್ಧಿಕವಾಗಿ ಪ್ರವೇಶವಾಗುವುದಕ್ಕಿಂತ ಮುಂಚೆ ಸಂವಿಧಾನದ ಆಶಯಗಳು ಪರಿಚಯವಾದದ್ದು ಅಥವಾ ಸಂವಿಧಾನ ಅಂದರೆ ಏನು ಎಂದು ತಿಳಿದದ್ದು 1970ರ ದಶಕದಲ್ಲಿ. ಇದಕ್ಕೆ ಪ್ರಮುಖ ಕಾರಣಗಳೆಂದರೆ 1975ರ ಜೂನ್, 26ರಂದು ಜಾರಿಯಾದ ತುರ್ತುಪರಿಸ್ಥಿತಿ. ಇದೇ ಸಂದರ್ಭದಲ್ಲಿ ಕೇಂದ್ರಸರ್ಕಾರ ಜುಲೈ 1ರಂದು 20 ಅಂಶಗಳ

ಕಾರ್ಯಕ್ರಮಗಳನ್ನು ದೇಶದಾದ್ಯಂತ ಜಾರಿ ಮಾಡಿತು. ಅದರಲ್ಲಿ ವಿಶೇಷ ಅಂಶವಾಗಿದ್ದು 'ಉಳುವವನೆ ಭೂಮಿಯ ಒಡೆಯ' ಎನ್ನುವ ಅಂಶ. ಈ ಕ್ರಾಂತಿಕಾರಕ ಕಾನೂನಿಂದ ದಲಿತರ ಬದುಕಿನಲ್ಲಿ ಅನೇಕ ರೀತಿಯ ಪಲ್ಲಟಗಳಿಗೆ 1970ರ ದಶಕ ಕಾರಣವಾಯಿತು.

ತುರ್ತುಪರಿಸ್ಥಿತಿಯ ಹೇರಿಕೆಯನ್ನು ಆಂತರಿಕ ಅಡಚಣೆ ಎಂಬ ಕಾರಣವನ್ನು ನೀಡಿ ಅಂದಿನ ಪ್ರಧಾನಿ ಇಂದಿರಾಗಾಂಧಿಯವರು ತಮ್ಮ ರಾಜಕೀಯ ದಾಳವನ್ನಾಗಿ ಉಪಯೋಗಿಸಿಕೊಂಡರು. ಗುಜರಾತ್ ಚುನಾವಣಾ ಫಲಿತಾಂಶ ಹಾಗೂ ಅಲಹಾಬಾದ್ ನ್ಯಾಯಾಲಯದ ತೀರ್ಪು ಇಂದಿರಾಗಾಂಧಿಯನ್ನು ರಾಜಕೀಯವಾಗಿ ಕುಗ್ಗಿಸುವ ಫಲಿತಾಂಶ ಹಾಗೂ ತೀರ್ಪುಗಳಾಗಿದ್ದವು. ಅದಕ್ಕೆ ಕಾರಣ ರಾಜ್‌ನಾರಾಯಣ್(ಉತ್ತರಪ್ರದೇಶದ ರಾಯ್ ಬರೇಲಿ ಕ್ಷೇತ್ರದ ಸಮಾಜವಾದಿ) ಎಂಬ ವ್ಯಕ್ತಿಯು ಇಂದಿರಾಗಾಂಧಿ ವಿರುದ್ಧ ಲಂಚದ ಆರೋಪ ಹಾಗೂ ಸರ್ಕಾರಿ ಸಂಪನ್ಮೂಲಗಳ ದುರ್ಬಳಕೆ ಮಾಡಿಕೊಂಡಿದ್ದಾರೆಂದು ಅಲಹಾಬಾದ್ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಿದರು. ರಾಜ್‌ನಾರಾಯಣ್ ಅವರು ಮಾಡಿರುವ ಆರೋಪವನ್ನು ನ್ಯಾಯಾಲಯವು ಪರಿಶೀಲಿಸಿ ಮುಂದಿನ 6 ವರ್ಷಗಳವರೆಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಪ್ರಧಾನಿ ಇಂದಿರಾಗಾಂಧಿ ಅವರು ಅನರ್ಹ ಎಂದು ತೀರ್ಪನ್ನು ನೀಡಿತು. ಇದರ ಪರಿಣಾಮದಿಂದಾಗಿ ವಿರೋಧಪಕ್ಷ ಮತ್ತು ಸ್ವಪಕ್ಷದವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡುವಂತೆ ಒತ್ತಡ ಹಾಕುತ್ತಿದ್ದರು. ಅಂತಹ ಸಂದರ್ಭದಲ್ಲಿ ತಮ್ಮ ರಾಜಕೀಯ ಸ್ಥಾನವನ್ನು ಭದ್ರಗೊಳಿಸುವ ಸಲುವಾಗಿ ಇಂದಿರಾಗಾಂಧಿಯವರು ಆಂತರಿಕ ಅಡಚಣೆ ಎಂಬ ಕಾರಣವನ್ನು ನೀಡಿ ಸಂವಿಧಾನದ 352ನೇ ವಿಧಿಯ ಪ್ರಕಾರ ತುರ್ತುಪರಿಸ್ಥಿತಿಯನ್ನು ಘೋಷಿಸಿದರು.

ಈ ಸಂದರ್ಭದಲ್ಲಿ ಜಮೀನ್ದಾರಿವರ್ಗವು ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಜಾರಿಯಾದ ಕಾನೂನು ಕಾಯ್ದೆಗಳು ದಲಿತಸಮುದಾಯಗಳ ಪರವಾಗಿದ್ದ ಕಾರಣದಿಂದ ಅದನ್ನು ಅರಗಿಸಿಕೊಳ್ಳಲಾಗದೆ ಹಲವು ಅಮಾನುಷವಾದ ಕೃತ್ಯಗಳನ್ನು ಎಸಗಿದರು. ಇದುವರೆಗೂ ತಮ್ಮ ಮನೆಗಳಲ್ಲಿ, ಹೊಲ–ಗದ್ದೆಗಳಲ್ಲಿ ತಮ್ಮ ಸೇವೆಯನ್ನು ಮಾಡುತ್ತಿದ್ದ ಕೆಳಜಾತಿಯ ಜನರಿಗೆ ಭೂಮಿಯನ್ನು ಬಿಟ್ಟುಕೊಡಬೇಕು ಎಂಬ ಕಾನೂನು ಹೊರಬಿದ್ದಾಗ ಹಾಗೂ ಕೆಲವು ದಲಿತರಿಗೆ ಆ ಕಾನೂನಿನ ಬಗ್ಗೆ ಅರಿವು ಉಂಟಾಗಿ ದಲಿತೇತರರ ವಿರುದ್ಧ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಮುಂದಾದರು. ಆ ಸಂದರ್ಭದಲ್ಲಿ ದಲಿತರ ಮೇಲೆ ಸಾಕಷ್ಟು ಹಲ್ಲೆಗಳು ನಡೆದವು. ಆದರೆ ಇದಕ್ಕೆ ಯಾವ ಕೇಸ್‌ಗಳು ದಾಖಲಾಗಿರುವುದಿಲ್ಲ ಹಾಗೂ ಅನೇಕ ದಲಿತಕುಟುಂಬಗಳು ಇಲ್ಲವಾಗುತ್ತವೆ. ಈ ಹತ್ಯೆಗಳಿಗೆ ಬೇರೆ ರೀತಿಯ ಸ್ವರೂಪವನ್ನು ಕೊಟ್ಟು ಅಂದರೆ ಕೌಟುಂಬಿಕ ಕಲಹ, ಜೀವನದಲ್ಲಿ ಜುಗುಪ್ಸೆ, ಹೆಂಡತಿಯ ಅನೈತಿಕ ಸಂಬಂಧದಿಂದ ಮನನೊಂದು ಆತ್ಮಹತ್ಯೆ, ಸಾಲ ತೀರಿಸಲಾಗದೆ ಆತ್ಮಹತ್ಯೆ ಎಂಬ ಕಾರಣವನ್ನು ನೀಡಿ ಯಾವುದೇ ಪುರಾವೆಗಳು ಸಿಗದಂತೆ ಮಾಡಲಾಯಿತು. ಆದರೆ ಪೋಲೀಸ್ ದಾಖಲೆಗಳು ಕಾಣೆಯಾದ ಪ್ರಕರಣಗಳು ಎಂಬುದಾಗಿ ಹೇಳುತ್ತವೆ. 'ಆ ಸಂದರ್ಭದಲ್ಲಿ 3800 ಕಾಣೆಯಾದ ಪ್ರಕರಣಗಳು ದಾಖಲಾಗುತ್ತವೆ.' ದಲಿತ ಸ್ತ್ರೀಯರ ಮೇಲೆ ಅತ್ಯಾಚಾರಗಳು, ಜಾತಿನಿಂದನೆಯಂತಹ ಅನೇಕ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗಲಾರಂಭಿಸುತ್ತವೆ. ತುರ್ತುಪರಿಸ್ಥಿತಿ ಜಾರಿಯಾದ ಬಳಿಕ ದಲಿತರಿಗೆ ಅದು ವರವೂ ಹೌದು, ಶಾಪವೂ ಹೌದು ಎಂಬುದಾಗಿ ಅಭಿಪ್ರಾಯಪಡಲಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿಯೇ ಅಂಬೇಡ್ಕರ್ ಅವರು ಸಂವಿಧಾನ ರಚನಾಸಭೆಗೆ ಆಯ್ಕೆಯಾಗುವುದಕ್ಕಿಂತ ಮುಂಚೆ ಅಖಿಲ ಭಾರತ ಪರಿಶಿಷ್ಟ ಜಾತಿಗಳ

ಒಕ್ಕೂಟದ ಪರವಾಗಿ ಪರಿಶಿಷ್ಟ ಜಾತಿಗಳ ರಕ್ಷಣೆ ಕೋರಿ ಸಂವಿಧಾನ ರಚನಾಸಭೆಗೆ ಅರ್ಪಿಸಿದ 'ರಾಜ್ಯಗಳು ಮತ್ತು ಅಲ್ಪಸಂಖ್ಯಾತರು' ಎನ್ನುವ ಮನವಿ ಪ್ರತಿಯಲ್ಲಿ ಅನುಚ್ಛೇದ ಎರಡು ಖಂಡ ನಾಲ್ಕರ, ನಾಲ್ಕನೇ ಕಲಂನಲ್ಲಿ ಕೃಷಿ ಒಂದು ಸರ್ಕಾರಿ ಕೈಗಾರಿಕೆಯಾಗಿರತಕ್ಕದ್ದು ಎಂದು ಭೂಮಿಯ ರಾಷ್ಟ್ರೀಕರಣವನ್ನು ಸಂವಿಧಾನ ರಚನಾಸಭೆಗೆ ಅನುಷ್ಠಾನಗೊಳಿಸಬೇಕೆಂದು ಹೇಳಿದ್ದಾರೆ. ಇವರ ಮುಂದಾಲೋಚನೆ ಮತ್ತು ಭಾರತೀಯರನ್ನು ಒಡಲಾಳದಿಂದ ಗ್ರಹಿಸಿದ್ದು ಮತ್ತು ಅದು ಕಾನೂನಾತ್ಮಕವಾಗಿ ದೊರೆಯಲು ಪ್ರಾರಂಭಿಸಿದ್ದು 1975ರ ನಂತರದ ದಿನಗಳಲ್ಲಿ.

1970ರ ದಶಕದಲ್ಲಿ ದಲಿತ ಸಂಘರ್ಷ ಸಮಿತಿಯು ಹುಟ್ಟಿಕೊಂಡು ದಲಿತ ಸಮುದಾಯ ಗಳಲ್ಲಿ ಜಾಗೃತಿಯನ್ನು ಮೂಡಿಸುತ್ತ ಹೋಗುತ್ತದೆ. ಅದರ ಬೆನ್ನಲ್ಲಿಯೇ 'ಕಡ್ಡಾಯ ಶಿಕ್ಷಣ' ಜಾರಿಗೆ ಬಂದ ನಂತರ ದಲಿತಸಮುದಾಯದವರು ಅಕ್ಷರವಂತರಾಗಿ ದಬ್ಬಾಳಿಕೆಯ ವಿರುದ್ಧ ಸಿಡಿದು ನಿಲ್ಲುತ್ತಾರೆ. ದುಡಿಯುವ ವರ್ಗವು ಜಮೀನ್ದಾರಿವರ್ಗದವರನ್ನು ಧಿಕ್ಕರಿಸಿ ಭೂಮಿಯ ಹಕ್ಕನ್ನು ಪಡೆಯುವ ಕಾಲ ಮತ್ತು ಅವರ ವಿರುದ್ಧ ಮರುಪ್ರಶ್ನೆಯನ್ನು ಮಾಡುವ ಕಾಲಘಟ್ಟ. 'ಮಾತು ಬಾರದ ಮೂಕನಿಗೂ ಮಾತನಾಡುವಂತೆ ಮಾಡಿದ್ದು' ತುರ್ತುಪರಿಸ್ಥಿತಿಯ ಸಂದರ್ಭ. 'ಉಳುವವನೆ ಭೂ ಒಡೆಯ' ಎಂಬ ಕಾನೂನು ಜಾರಿಗೆ ಬಂದದ್ದು ದಲಿತ ಸಮುದಾಯದಲ್ಲಿ ಆರ್ಥಿಕವಾಗಿ ಸದೃಢವಾಗಿರುವಂತೆ ಮೇಲ್ನೋಟಕ್ಕೆ ಕಂಡಿತಾದರೂ, ಅದರ ಒಳಮರ್ಮವನ್ನು ಅನುಭವಿಸಿದ್ದು ಅದೇ ಶೋಷಿತ ಸಮುದಾಯದವರು.ಏಕೆಂದರೆ ದೇವಸ್ಥಾನಕೇಂದ್ರಿತ ಭೂಮಿ ಅಂದರೆ ಬ್ರಾಹ್ಮಣರಿಗೆ ಸೇರಿದ ಭೂಮಿಗಳನ್ನು ದಲಿತರು ಕೃಷಿ ಮಾಡಿ ಅದರಿಂದ ಬಂದ ಫಸಲನ್ನು ತೆಗೆದು ದೇವಸ್ಥಾನಗಳಿಗೆ ಕೊಡುತ್ತಿದ್ದರು.ಅಂತಹ ಭೂಮಿಗಳು ಕಾನೂನಿನ ಮುಖಾಂತರ ಕೃಷಿ ಮಾಡುತ್ತಿದ್ದ ದಲಿತರ ಪಾಲಾಗುತ್ತವೆ. ಆದರೆ ಒಕ್ಕಲಿಗ ಮತ್ತು ಲಿಂಗಾಯತರ ಭೂಮಿಯನ್ನು ಕೃಷಿ ಮಾಡುತ್ತಿದ್ದವರಿಗೆ ಅನ್ಯಾಯವಾಗುತ್ತದೆ. ಮೇಲ್ವರ್ಗದವರು ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಕೆಳವರ್ಗದವರನ್ನು ಜಾತಿನಿಂದನೆ, ಅವಹೇಳನಕಾರಿ ಮಾತುಗಳು, ಅತ್ಯಾಚಾರಗಳನ್ನು ಮಾಡುತ್ತ ದಲಿತಸಮುದಾಯದಲ್ಲಿ ಭಯವನ್ನು ಹುಟ್ಟಿಸುತ್ತಾರೆ. ಆದರೂ ಪ್ರಜ್ಞಾವಂತ ಯುವಕರು ಅದನ್ನು ಪ್ರಶ್ನೆಮಾಡುವುದರ ಮುಖೇನ ದಲಿತಸಮುದಾಯದಲ್ಲಿ ಅರಿವನ್ನು ಉಂಟುಮಾಡಿದರು. ಇದರ ಪರಿಣಾಮ ದಲಿತರ ಮೇಲೆ ಶೋಷಣೆಗಳು, ದಬ್ಬಾಳಿಕೆಗಳು ಹೆಚ್ಚಿದಂತೆ ಹತ್ಯೆಯ ಸ್ವರೂಪವನ್ನು ಪಡೆಯುತ್ತದೆ. ಇಂತಹ ಸಂದರ್ಭದಲ್ಲಿ ದಲಿತರಲ್ಲಿ ಜಾಗೃತಿ ಮೂಡಿಸಲು ಪಂಚಮ, ಸಂಕ್ರಮಣ, ಆಂದೋಲನ ಎಂಬ ಪತ್ರಿಕೆಗಳ ಪಾತ್ರ ಮಹತ್ವವಾದುದು. ಅದರಲ್ಲಿ ವಿಶೇಷವಾಗಿ 'ಪಂಚಮ' ಎಂಬ ಪಾಕ್ಷಿಕ ಪತ್ರಿಕೆಯಲ್ಲಿ ದಲಿತರ ಮೇಲಿನ ಶೋಷಣೆ, ದಬ್ಬಾಳಿಕೆಗಳ ಕುರಿತ ವಿಷಯಗಳನ್ನು ಸಾರ್ವಜನಿಕವಾಗಿ ತಿಳಿಸುವ ಜವಾಬ್ದಾರಿಯನ್ನು ಪ್ರಮಾಣಿಕವಾಗಿ ಮಾಡಿದೆ. ಜೀತಗಾರಿಕೆಯ ಬಗ್ಗೆ, ಭೂಸಂಬಂಧಿತ ಸಮಸ್ಯೆಗಳ ಬಗ್ಗೆ, ದಲಿತ ಮಹಿಳೆಯರ ಮೇಲೆ ನಡೆಯುತ್ತಿದ್ದ ದೌರ್ಜನ್ಯಗಳ ಬಗ್ಗೆ ವರದಿ ಮಾಡಿ ಸರ್ಕಾರದ ಗಮನಕ್ಕೆ ತರುವಲ್ಲಿ ಹಾಗೂ ದಲಿತಚಳವಳಿಯಲ್ಲಿ ಪಂಚಮ ಪತ್ರಿಕೆಯ ಪಾತ್ರ ಹಿರಿದಾಗಿದೆ. ಇದೇ ಮಾದರಿಯಲ್ಲಿ ಸಂಕ್ರಮಣ ಮತ್ತು ಆಂದೋಲನ ಪತ್ರಿಕೆಗಳು ಪ್ರಗತಿಪರವಾಗಿ ಅನ್ಯಾಯಕ್ಕೆ ಒಳಗಾದವರಿಗೆ ನ್ಯಾಯ ದೊರಕಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ.

**ಪರಾಮರ್ಶನ ಗ್ರಂಥಗಳು**


- ಚಿನ್ನಸ್ವಾಮಿ ಸೋಸಲೆ, ಎನ್. (2012). *ದಲಿತರ ಬದುಕು–ಮೆಲುಕು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

- ಇಂದ್ರಾಣಿ ಜಗಜೀವನರಾಮ್. (2014). *ಡಾ. ಬಾಬು ಜಗಜೀವನರಾಮ್ ಹೋರಾಟದ ಬದುಕು.* (ಅನು: ತೀಪ್ಪೆಸ್ವಾಮಿ). ಡಾ.ಬಾಬು ಜಗಜೀವನರಾಮ್ ಅಧ್ಯಯನ ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ.
- ಹಣಮಂತ್ರಾಯ ದೊಡ್ಡಮನಿ. (2011). *ದೇವರಾಜು ಅರಸು ಮತ್ತು ಕರ್ನಾಟಕದ ರಾಜಕಾರಣ.* ಗೀತಾಂಜಲಿ ಪುಸ್ತಕ ಪ್ರಕಾಶನ.
- ಕುಮಾರಸ್ವಾಮಿ, ಎಚ್. (2010). *ದಲಿತ ಚಳವಳಿ ಮತ್ತು ಸಾಮಾಜಿಕ ನ್ಯಾಯ.* ದಲಿತ ಅಭಿವೃದ್ಧಿ ಸಂಸ್ಥೆ.
- ಕೋಣಂದೂರು ವೆಂಕಟಪ್ಪಗೌಡ (ಸಂ.). (1984). *ಪರಿವರ್ತನೆಯ ಹರಿಕಾರ ದೇವರಾಜ ಅರಸು.* ಯಶಸ್ವಿ ಪ್ರಕಾಶನ.
- ಕುಶ್ವಂತ್ ಸಿಂಗ್. (2002). *ವೈ ಐ ಸಪೋರ್ಟೆಡ್ ದಿ ಎಮರ್ಜೆನ್ಸಿ: ಎಸ್ಸೇಂಸ್ ಆ್ಯಂಡ್ ಪ್ರೋಫೈಲ್.* ಪೆಂಗ್ವಿನ್ ಬುಕ್ಸ್ ಇನ್ ಇಂಡಿಯಾ.
- ರಶ್ಮಿ, ಎಸ್. (2018). *ಕರ್ನಾಟಕದಲ್ಲಿ ತುರ್ತುಪರಿಸ್ಥಿತಿ ಪ್ರಭಾವ ಮತ್ತು ಪರಿಣಾಮಗಳು.* ಅಭಿನವ ಪ್ರಕಾಶನ.